Regd No BG 155

Sri "SATYAVADI"
— DAILY —
MYSORE4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

25—7—1962

ಪ ಮುಖ ವರ್ತಮಾನಗಳಿಗೆ
ಸಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸ್ಥಾಪಕರು— ಆರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯಶಾಸ್ತ್ರಿ [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಚೀನೀಯಾಕೆ ಭಾರತದ ಕರೆ ರ

ನವ ದೆಹಲಿ 24 — ಗಾಲ್ವಾನ್ ಕಣಿವೆಯಲ್ಲಿ ಅಕ್ರಮಣಕಾರಿ ನೆಲೆ ಯೊಂದನ್ನು ಸ್ಥಾಪಿಸುವ ಕಾರಣದಿಂದ ಪ್ರಶ್ನೆಗಳನ್ನು ಗೊಂದಲ ಮಾಡುತ್ತಿರುವ ಬಗ್ಗೆ ಪೀಕಿಂಗಿನ ಪ್ರಯತ್ನವನ್ನು ಭಾರತ ಸರ್ಕಾರ, ತಾ|| 13 ಮತ್ತು 16 ರ ಚೀನಾದ ನಕ್ಷೆಗಳಿಗೆ ಇಂದು ಕೊಟ್ಟ ಉತ್ತರದಲ್ಲಿ ಹೊರಬಾಕಿದೆ ಗಾಲ್ವಾನ್ ಕಣಿವೆಯಲ್ಲಿ ಭಾರತ ಸೇನೆಯ ಸಂಪರ್ಕ ಹಾಗೂ ಸಂಬರಾಜಿನಲ್ಲಿ ಚೀನಾ ಪ್ರವೇಶ ಮಾಡದಿರುವಂತೆ ಒತ್ತಾಯವನ್ನು ಭಾರತ ಸರ್ಕಾರ ಮಾಡಿದೆ ಆ ಪ್ರದೇಶದ ಪೂರ್ವಕ್ಕೆ ಅಂತರಾಷ್ಟ್ರ ಪ್ರದೇಶಕ್ಕೆ ವಾಪಸಾಗುವಂತೆ ಚೀನೀಯರಿಗೆ ಸೂಚಿಸಿದೆ 1956 ರಿಂದ 60 ರ ವರೆಗಿನ ಚೀನಾದ ನಕ್ಷೆಗಳು ಆ ಪ್ರದೇಶದಲ್ಲಿ ಅಂತರರಾಷ್ಟ್ರ ಗಡಿಯ ಪ್ರಶ್ನೆ ಗೊಂದಲಗೊಳಿಸಲ್ಪಟ್ಟಿದೆ ಎಂದು ಭಾರತ ತಿಳಿಸಿದೆ

ಯುದ್ಧವಾಗುವುದಿಲ್ಲ

ಗಡಿ ಕಲಹ ಯುದ್ಧಕ್ಕೆ ದಾರಿ ಮಾಡುವುದಿಲ್ಲವೆಂದು ಚೀನಾ ವಿದೇಶ ಮಂತ್ರಿ ಮಾ|| ಚೆ ಯಿ ನಿನ್ನೆ ಜಿನೀವಾದಲ್ಲಿ ತಿಳಿಸಿದರು

★★★

ನವ ದೆಹಲಿಯಲ್ಲಿ ಪ್ರಧಾನಿ ನೆಹರು ಹಾಗೂ ರಷ್ಯದ ಪ್ರಥಮ ಉಪ ಪ್ರಧಾನಿ ಮಿಕಾಯರ್ಯಂರವರು ಚೀನಾ-ಭಾರತ ಗಡಿ ಕಲಹ ಮೊದಲ್ಗೊಂಡು ವಿಶ್ವವಿಚಾರ ಪರಿಶೀಲಿಸಿದರು

ಮದ್ರಾಸು ವಿಧಾನ ಸಭೆಯಲ್ಲಿ ನಿನ್ನೆ ಕಾಂಗ್ರೆಸು ಸದಸ್ಯ ಶ್ರೀ ಎ ದ ಕ್ಷಿಣಾಮೂರ್ತಿ ಗೌಂಡರು ಮಾತನಾಡುತ್ತಾ, ಹರಿಜನರು ಹಾಗೂ ಸವರ್ಣೀಯರು ವಿವಾಹವಾಗಬೇಕೆಂಬ ಕಡ್ಡಾಯ ಶಾಸನದಿಂದ ಮಾಯಾಕೋಲಿನಂತೆ ಕೆಲಸ ಆಗುವುದಿಲ್ಲ ಎಂದರು.

ಪಾಕಿಸ್ತಾನ ರಾಷ್ಟ್ರೀಯ ಅಸೆಂಬ್ಲಿಯ ಪ್ರಮುಖ ಸದಸ್ಯ ಮುಸಿಹುರ್ ರೆಹಮಾನ್, ಕರಾಚಿ ಮತ್ತೆ ಪಾಕಿಸ್ತಾನದ ರಾಜಧಾನಿ ಆಗಬೇಕೆಂದು ಒತ್ತಾಯ ಮಾಡಿದರು

ಪ್ರಧಾನಿಗಳಿಗೆ ಪತ್ರ

ಲಡಕ್ಕಿನಲ್ಲಿ ಕೆಡುತ್ತಿರುವ ಪರಿಸ್ಥಿತಿ ಪರಿಶೀಲಿಸಲು, ಪಾರ್ಲಿಮೆಂಟಿನ ಉಭಯ ಸದನಗಳ ಜರೂರು ಅಧಿವೇಶನ ಕರೆಯ ಬೇಕೆಂದು ಪಾರ್ಲಿಮೆಂಟಿನ ಪ್ರಜಾ ಸೋಷಲಿಸ್ಟ್ ಪಕ್ಷದ ಸದಸ್ಯರು ಪ್ರಧಾನಿ ನೆಹರುರವರಿಗೆ ಪತ್ರ ಬ[illegible]

ಅಳತೆ ಯಂತ್ರ !

ಬೆಂಗಳೂರು 24 — ಕಾಮಗಾರಿ ಇಲಾಖೆ ಲಂಚದ ವಿಸ್ತೀರ್ಣವನ್ನು ಅಳೆಯುವ ಯಂತ್ರವನ್ನು ಕಂದಾಯಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ನಿನ್ನೆ ವಿಧಾನ ಸಭೆಯಲ್ಲಿ ತಿಳಿಸಿದರು

ಮದುವೆ ಮಾರ್ಕೆಟ್ಟಿಗೆ ನೀವು ಹೋಗಿ ಓವರ್ಸಿಯರು ಹಾಗೂ ಅಸಿಸ್ಟೆಂಟು ಇಂಜಿನಿಯರುಗಳಿಗೆ ಏನು ಬೆಲೆ ಪತ್ರ ಮಾಡಿ ಅವರ್ನು ಮಾಡುವಹಣಕ್ಕೆ ಅದು ಖಂಡಿತವಾದ ಸೂಚನೆ ಎಂದು ಅವರು ತಿಳಿಸಿದರು.

× ಮಯೂರಭಂಜ ಜಿಲ್ಲೆಯಲ್ಲಿ ಕಾಲರ ಪರೀ[illegible] ರುತ್ತದೆ ಈ ವರೆಗೆ ಮರಣಹೊಂ[illegible] ಸಂಖ್ಯೆ 120.

[illegible] ಸಂಚಾಂಗ

[illegible] ದರ್ಶಾಧಿಕಾರಿ
[illegible] ಪಾವಣಿ
[illegible] ದ
[illegible] ಕೃತ್ತಿ ಕೆ

ಕೇರಳ ರಾಜಕೀಯ

ಪ್ರಜಾ ಸೋಷಲಿಸ್ಟ್ ಪಕ್ಷವನ್ನು ತನ್ನ ಆಡಳಿಕಟ್ಟಿನಲ್ಲಿ ತೆಗೆದುಕೊಂಡು ಭದ್ರ ಸರ್ಕಾರ ರಚಿಸುವ ನಿರಾಶೆಯುತ ಪ್ರಯತ್ನವನ್ನು ಕೇರಳದ ಕಾಂಗ್ರೆಸಿನ ನಾಯಕರು ಮಾಡುತ್ತಿರುವರೆಂದು ತಿರುವೇಂದ್ರಂ ವಾರ್ತೆ ಕಾಂಗ್ರೆಸಿನೊಡನೆ ಪಿಎಸ್ಪಿ ಬಹಿರಂಗವಾಗಿ ವಿಲೀನವಾಗುವುದಿಲ್ಲ. ಶ್ರೀ ಪಟ್ಟಂಥಾನು ಪಿಳ್ಳೆಯವರನ್ನೊಳಗೊಂಡು ಪಿಎಸ್ಪಿ ನಾಯಕರು ಕಾಂಗ್ರೆಸಿನೊಡನೆ ಸರ್ಕಾರಿಸಲು ಒಪ್ಪಬಹುದು ' ಅಂಥಹ ಸಹಕಾರಕ್ಕೆ ಪ್ರಧಾನ ಷರತ್ತು ಎಂದರೆ ಕಾಂಗ್ರೆಸಿನ ಯಾವ ಸರ್ಕಾರ ಬಂದರೂ ಶ್ರೀ ಪಟ್ಟಂಥಾನು ಪಿಳ್ಳೆಯವರು ಮುಖ್ಯ ಮಂತ್ರಿ ಆಗಬೇಕೆಂಬುದು ಕಾಂಗ್ರೆಸು ಈ ಷರತ್ತಿಗೆ ಒಪ್ಪೀತೆ ಎಂಬುದನ್ನು ಈಗಲೇ ಹೇಳುವಂತಿಲ್ಲ

×

ಭೂಪಾಲಿನಿಂದ ಬಂದಿರುವ ವರದಿಯಂತೆ ಮಧ್ಯ ಪ್ರದೇಶ ವಿಧಾನ ಸಭೆಯಲ್ಲಿ ನಿನ್ನೆ ಸ್ಪೀಕರರು ಅಜ್ಞೆಗೆ ಬದ್ಧರಾಗದ 14 ಸೋಷಲಿಸ್ಟ್ ಸದಸ್ಯರನ್ನು ಒಬ್ಬರಾದನಂತರ ವತ್ತೊಬ್ಬರನ್ನು ಮಾರ್ಷಲ್ ಹೊರಗೆಹಾಕಿದರು ಸ್ಪೀಕರರು ಶವ್ಯ ಚೇಂಬರಿನಲ್ಲಿ ನಿರಾಕರಿಸಿದ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವಂತೆ ಅವರು ಒತ್ತಾಯ ಮಾಡಿದರು ಸುಗ್ರೀಯ ಕಾಲದಲ್ಲಿ ಪ್ರಹಬ್ಬಾದ ಜಿಲ್ಲೆಯ ಗ್ರಾಮವೊಂದರಲ್ಲಿ ಸುಗ್ರೀಯ ಕಾಲದಲ್ಲಿ ಈದಿನಾಲ್ಕು ಜನರ ಬಂಧನವಾದುದು ಗ್ರಾಮಸ್ಥರಿಗೆ ಅಕೃಪ್ತಿಯನ್ನುಂಟು ಮಾಡಿದೆ ಎಂಬುದು ನಿಲುವಳಿ ಸೂಚನೆ

ಭಾರತದ ಮೂರನೆಯ ಯೋಜನೆಗೆ ಜರ್ಮನಿ ಸಹಾಯ ಮಾಡುವ ವಿಷಯದಲ್ಲಿ ಭಾರತದ ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಹಾಗೂ ಭಾರತದಲ್ಲಿರುವ ಜರ್ಮನಿ ರಾಯಭಾರಿ ಡಾ|| ಮಾಕ್ಸ್ವೆಡೈರಾರು ನಿನ್ನೆ ನವ ದೆಹಲಿಯಲ್ಲಿ ಮಾತುಕತೆ ನಡೆಸಿದರು.

ಮುಷ್ಕರ

ಶುಲ್ಕ ಏರಿಕೆ ವಿರುದ್ಧ ಈ ದಿನ ಮೈಸೂರು ಕಾಲೇಜುಗಳ ವಿದ್ಯಾರ್ಥಿಗಳು ಮುಷ್ಕರ ಆಚರಿಸಿದರು

ರಾಜ್ಯ ಸರ್ಕಾರದ ಕಡ್ಡಾಯ ವಾರ್ಥಿಕ ಶಿಕ್ಷಣ ಯೋಜನೆಯು ಅನ್ವಯಿಗಾಮಾಂತರ ಪ್ರದೇಶಗಳಲ್ಲಿ ಅಲ್ಪ ಡಿ ಸೌಸುಗಳ ಕಟ್ಟಡಗಳ ನಿರ್ಮಾಣವಾಗುವ ಸೂಚನೆ ಇವೆ

ಮೈಸೂರು ರಾಜ್ಯದಲ್ಲಿ ಶಾಲೆಗೆ ಹೋಗುವ 10 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುವ ಅಶಾದಾಯಕ ಯೋಜನೆಯನ್ನು ಮೈಸೂರು ಸರ್ಕಾರ ಸಿದ್ಧಪಡಿಸಿರುವುದಾಗಿ ಬೆಂಗಳೂರು ವಾರ್ತೆ ತಿಳಿಸಿತ್ತದೆ

ಆಗಸ್ಟ್ 24 ರಂದು ಬೆಂಗಳೂರಿನ ವಿಧಾನಸೌಧ ಹಾಲ್‌ನಲ್ಲಿ ಅಖಿಲ ಭಾರತ ಮೇಯರುಗಳ ಸಂಮೇಳನ ಉದ್ಘಾಟನೆ ವಾಗುವುದು 19 ಮೇಯರುಗಳು ಇದರಲ್ಲಿ ಭಾಗವಹಿಸುವರು

ತಿರುಮಲ್ಲೆ ಸಾರ್ವಜನಿಕರು ಹಾಗೂ ಅಂಗಡಿಯವರು ತಾವು ದ 3 ರಾಸು ನಿಕ್ಕಲ್ ಒಂದು ಆಣೆಯನ್ನು ಸ್ವೀಕರಿಸುತ್ತಿಲ್ಲ ಭಕ್ತರು ಆ ನಾಣ್ಯಗಳನ್ನು ಅಲ್ಲಿ ದೇವಾಲಯದ ಹುಂಡಿಯಲ್ಲಿ ಹಾಕುತ್ತಿರುವರು

ಅಧಿಕಾರಕ್ಕಾಗಿ ಹೋರಾಡುವುದನ್ನು ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮೈಸೂರು ನಗರದಲ್ಲಿ ನಿನ್ನೆ ಸಮಾರಂಭವೊಂದರಲ್ಲಿ ಖಂಡಿಸಿದರು

ನವ ದೆಹಲಿಯಲ್ಲಿ ನಿನ್ನೆ ಸೇನೆ ಕ ಮಾಂಡರುಗಳ ಸಂಮೇಳನವನ್ನು ಉದ್ದೇಶಿಸಿ ಪ್ರಧಾನಿ ನೆಹರು ಭಾಷಣ ಮಾಡಿದರು ಅಂತರರಾಷ್ಟ್ರ ಪರಿಸ್ಥಿತಿ ವಿವರಿಸಿದರೆಂದು ಗೊತ್ತಾಗಿದೆ

ನಿಮಗೆ ಗೊತ್ತೆ ?

ಸುಲಭವಾಗಿ ಕೊಲ್ಲಬಹುದಾದ, ಸುಲಭ ಬೆಲೆಯುಳ್ಳ ಒಳ್ಳೆಣ್ಣೆ ತಿಗಣೆಯನ್ನು ಕೊಲ್ಲಬಲ್ಲದು

ಆಶಾಳ ನಿರಾಶೆ !

ಬರೇಖಿನ ಡಾಕ್ಟರೊಬ್ಬರು ಆಡಿದ ಆಟವಿದು ; ಆಶಾ ಪಂಕಾಖಳ ಮೇಲೆ ಹೂಡಿದ ಆಟವಿದು ; ಜುಲೈ 6 ರಂದು ಗಾಬರಿಗೊಂಡ ಪೋಸ್ಟಮೆನ್ನನು ಬೊಂಬಾಯಿ ಸಾಂತಾ ಕ್ರುಜಿನಲ್ಲಿರುವ ಆಶಾಳ ಮನೆಗೆ ಬಂದು ಬಾಗಿಲು ತಟ್ಟಿದ : ಬಾಗಿಲು ತೆರೆದ ನಂತರ, ಆಶಾಳಿಗೆ ಇಪ್ಪತ್ತೊಂಭತ್ತು ರೂಪಾಯಿ ಕವರು ಕೊಡಬೇಕು, ಆಕೆ ತನ್ನೆದುರಿಗೆ ರುಜು ಮಾಡಬೇಕೆಂದನು ; ಆಶಾ ಆಗ ಮನೆಯಲ್ಲಿರಲಿಲ್ಲ ; ಸ್ವಲ್ಪ ಸಮಯಾನಂತರ ಪೋಸ್ಟಮೆನ್ ವಾಪಸ್ ಬಂದು 2000 ರೂಗಳ ಇಂಪೂರ್ಡ್ ಕವರಿನುದ್ದಾಗಿ ತಿಳಿಸಿದ ; ಆಶಾಗೆ ಹಂಗು ಬಡಿದಂತಾಯಿತು : ಯಾವ ಡಾಕ್ಟರು ಕಳುಹಿಸಿರಬಹುದು ಎಂದು ಆಶ್ಚರ್ಯಚಕಿತಳಾದಳು : ಪೋಸ್ಟಮೆನ್ ಕೊಟ್ಟ ಕಾಗದಗಳಿಗೆಲ್ಲಾ ರುಜುಮಾಡಿ ಹಣವನ್ನು ಕೇಳಿದಳು : ಪೋಸ್ಟಾಫೀಸಿಗೆ ಬಂದು ತೆಗೆದುಕೊಳ್ಳಬೇಕೆಂದು ತಿಳಿಸಿ ಪೋಸ್ಟ್‌ಮ್ಯಾನ್ ಹೊರಟುಹೋದನು. ಆಶಾ ಈ ವಿಷಯವನ್ನು ತಂದೆಗೆ ಫೋನು ಮಾಡಿ ತಿಳಿಸಿ, ಆತನ ಸೂಚನೆಯಂತೆ ಪೋಸ್ಟಾಫೀಸಿಗೆ ತನ್ನ ತಾಯಿಯು ಜೊತೆಯಲ್ಲಿ ಹೋದಳು : ಇವಳನ್ನು ಕಂಡು ಅಲ್ಲಿಯ ಸಿಬ್ಬಂದಿಗಳಾಗಲಿ, ಕೆಲಸಗಾರರಿಗಾಗಲಿ ಕೆಲಸ ನಿಲ್ಲಿಸಿ ಇವಳನ್ನೇ ನೋಡುತ್ತಾ ಕೂತರು ; ಆಮೇಲೆ ಇಪ್ಪತ್ತೊಂಭತ್ತು ಕಾಗದದ ಗುಮಾಸ್ತ ದೊಡ್ಡ ಕಬ್ಬಿಣ ಪೆಟ್ಟಿಗೆಯಿಂದ ಒಂದು ಕವರು ತೆಗೆದು ಇವಳಿಗೆ ಕೊಟ್ಟನು ; ಆಶಾ ಕವರನ್ನು ಒಡೆದು ಅದರಲ್ಲಿ 2000 ರೂಗಳ ಬದಲು 6 ಪುಟಗಳ ಕಾಗದವಿದ್ದುದನ್ನು ಕಂಡು ರೇಗಿಹೋದಳು : ತಾನು ನಾಲ್ಕು ಕಾಗದಗಳನ್ನು ಬರೆದಿದ್ದರೂ ತನಗೆ ಉತ್ತರ ಬರೆದಿಲ್ಲವೆಂದು ಡಾಕ್ಟರು ಆ ಕಾಗದದಲ್ಲಿ ಬರೆದಿದ್ದನು ; ಬೇಕಂತ ಕವರನ್ನು 2000 ರೂಗಳಿಗೆ ಇನ್ಶೂರು ಮಾಡಿದ್ದನು ! ಹೀಗಿತ್ತು ಡಾಕ್ಟರು ಹೂಡಿದ ತಂತ್ರ ! ಹಿಂದೆ ರಾಜಕಪೂರಿಗೆ ಅದ ಮೋಸಕ್ಕಿಂತ ಇದು ವಾಸಿ ; ರಾಜ ಕಪೂರಿಗೆ ಒಬ್ಬನು ಹಳೇ ಜೋಡುಗಳನ್ನು ಸುಂದರವಾಗಿ ಪ್ಯಾಕುಮಾಡಿ, ಪಾರ್ಸಲ್ಲು ಮೂಲಕ ಕಳುಹಿಸಿದ್ದನು !

ಕಳ್ಳತನಗಳ ಪತ್ತೆ

ಮೈಸೂರು 21— ಪೋಲೀಸರು ಈಚೆಗೆ ನಗರದಲ್ಲಿ ತಿರುಪತಿಪಳ್ಳಿ ಮೈಕೆಲ್ ಎಂಬ ಕಳ್ಳನನ್ನು ಬಂಧಿಸಿ ಅವನಿಂದ ರೂ 250 ಬೆಲೆಬಾಳುವ ಕೈ ಗಡಿಯಾರವನ್ನು ವಶಪಡಿಸಿಕೊಂಡರು — ಹಳೆಯ ಕೇಡಿ ಮೂಗ ಉ | ಸೀತಾರಾಮು ಎಂಬುವನನ್ನು ಬಂಧಿಸಿ ಅವನಿಂದ ರೂ 300 ಬೆಲೆ ಬಾಳುವ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಯಿತು : ಅತನಿಗೆ ಎಂಡು ವರ್ಷ ಕಠಿಣ ಸಜಾ ವಿಧಿಸಲಾಯಿತು — ಮನೆ ಮುರಿಯುವ ಆಯುಧಗಳನ್ನು ಪಡೆದಿದ್ದನೆಂದು ಮಂಡನಪಲ್ಲಿಯ ರಾಜಣ್ಣನೆಂಬುವನನ್ನು ಪೋಲೀಸರು ಬಂಧಿಸಿದ್ದಾರೆ

SHAKTI SUDHA

★★★

A Superb Tonic

Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಜೆಂಬಲಿಗರಾಗಿರಿ

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ಸ್

24th week Junglee

24ನೇ ವಾರ ಜಂಗ್ಲಿ

ಅಪ್ರತಿಮ ಹಿಂದಿ ಚಿತ್ರಂಶ .... ದಿನವಹಿ 3 ಪ್ರದರ್ಶನಗಳು

ಆಪೆರಾ— 20—7—62 ರಿಂದ

ಜಾದೂ ಮಹಲ್ Jadoo Mahal

ಹೆಲೆ, ಆಜಾದ್, ಪಿಂಲಾಲ್, ಕೃಷ್ಣಕುಮಾರಿ, ಸೈ' ಪಾತ್ರವಹಿಸಿರುವ

ಮಾಜಾಜಾಲಗಳಿಂದ ಕೂಡಿದ ರೋಮಾಂಚಕ ಹಿಂದಿ ಚಿತ್ರ

ದಿನವಹಿ 3 ಆಟಗಳು

ಸೋವಿಯತ್ ಒಕ್ಕೂಟದ ಜನತೆಯ ಕಲಾವಿದ ಹಿರಿಯ ನೋಬೆಲ್ ಶಾಂತಿ ಸೆರ್ಗೆಯ ತೊನೆಂಕೋವ್‌ನ ಪ್ರತಿಮೆಯೊಂದು ಪಾಟುಕ್ಕಲ್ಲೇ ಭೇಟಿಕಾರರ ಕಣ್ಣು ಅದ್ಭುತ [illegible] ಪ್ರವೇಶದ್ವಾರದ ಸ್ವಚ್ಛ ಅಲಂಕಾರದ ಭೇಟಿಕಾರನ್ನು ಸ್ವಾಗತ [illegible] ಕಣ್ಮನ ರಂಜನಾತ್ಮಕ ಚಟುವಟಿಕೆಯು ದೀರ್ಘ ಕಾಲದಲ್ಲಿ [illegible] ಮನ್ನು ಸೂರ್ಯಗಳ ಒಗ್ಗೆ ತಿಳಿಸಿತ್ತದೆ

Edited [illegible] lished by the Proprietor, M. S. Kuta[illegible] at the [illegible]yav[illegible] [illegible]m, Mysore. 4